ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

## ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ
## ಸ್ಪೆಷಲ್ ಕೇಸ್ ನಂಬರ್ : 103/2015

**ಫ್ರಾಸಾ- 3 ಚಾಸಾ- 3**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಅನಿತಾ ಎಂ ಜೆ |
| ತಂದೆಯ ಹೆಸರುಃ | : | ಜವರೇಗೌಡ |
| ವಯಸ್ಸುಃ | : | 41 ವರ್ಷ |
| ಉದ್ಯೋಗಃ | : | ಅಬಕಾರಿ ನಿರೀಕ್ಷಕರು , ಹಾಸನ ಉಪವಿಭಾಗ |
| ವಾಸ | : | ಹಾಸನ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 28-03-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ಡಿಸೆಂಬರ್ 2012ರಿಂದ ಜುಲೈ 2016ರವರೆಗೆ ನಾನು ಹಾಸನ ವಲಯ -2 ಅಬಕಾರಿ ನಿರೀಕ್ಷಕರ ಕಛೇರಿಯಲ್ಲಿ ಅಬಕಾರಿ ಉಪನಿರೀಕ್ಷಕಳಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ದಿಃ25-7-2013ರಂದು ಅಬಕಾರಿ ಉಪ ಆಯುಕ್ತರ ಆದೇಶದಂತೆ ಅಬಕಾರಿ ನಿರೀಕ್ಷಕರು ನನಗೆ ಹಾಸನ ಲೋಕಾಯುಕ್ತ ಕಛೇರಿಗೆ ಸಂಜೆ 5 ಗಂಟೆಗೆ ಹೋಗಿ ವರದಿ ಮಾಡಿಕೊಳ್ಳುವಂತೆ ತಿಳಿಸಿದರು. ಅದರಂತೆ ನಾನು ಲೋಕಾಯುಕ್ತ ಕಛೇರಿಗೆ ಹೋಗಿ ಚಾಸಾ.69ರವರ ಮುಂದೆ ವರದಿ ಮಾಡಿಕೊಂಡೆನು. ನಾನು ಹೋದಾಗ ಇತರೆ ಇಲಾಖೆಯ ನೌಕರರಾದ ಶ್ವೇತಾ, ಸುನಿಲ್, ಜೆ ಹೆಚ್ ಕೃಷ್ಣಮೂರ್ತಿ ಕೂಡ ಇದ್ದರು. ಅವರನ್ನು ಚಾಸಾ-69 ರವರು ನಮಗೆ ಪರಿಚಯ ಮಾಡಿಕೊಟ್ಟರು. ತನಿಖಾಧಿಕಾರಿಯು ತಮ್ಮ ಠಾಣೆಯಲ್ಲಿ ಆದಾಯಕ್ಕಿಂತ ಹೆಚ್ಚಿನ ಆಸ್ತಿ ಹೊಂದಿದ್ದಾರೆಂಬ ಆಪಾದನೆ ಮೇರೆಗೆ ಮೊಕದ್ದಮೆ

ದಾಖಲಾಗಿರುತ್ತದೆ, ಅದಕ್ಕೆ ದಾಳಿಗೆ ಹೋಗಬೇಕಾಗಿದೆ ದಿಃ26-7-2013ರಂದು ಬೆಳಿಗ್ಗೆ ಕಛೇರಿಗೆ ಬಂದು ವರದಿ ಮಾಡಿಕೊಳ್ಳಬೇಕೆಂದು ತಿಳಿಸಿದರು. ಅದರಂತೆ 26-7-2013ರಂದು ಬೆಳಿಗ್ಗೆ 5 ಗಂಟೆಗೆ ಲೋಕಾಯುಕ್ತ ಠಾಣೆಗೆ ಬಂದು ಚಾಸಾ-69ರವರ ಮುಂದೆ ಹಾಜರಾದೆವು. ಅವರು ಹಾಸನ ಉದಯಗಿರಿ ಬಡಾವಣೆಯ ಆನಂದ್ ಎಂಬುವವರ ಮನೆಗೆದಾಳಿಗೆ ಹೋಗಬೇಕಾಗಿದೆ ಎಂದು ನಮಗೆ ತಿಳಿಸಿದರು. ಅವರು ಎರಡು ಟೀಂ ಮಾಡಿಕೊಂಡು ಒಂದರಲ್ಲಿ ನನ್ನನ್ನು, ಚಾಸಾ-2, ಸುನಿಲ್, ಜಮೀಲ್ ಬೇಗ್, ಅಬ್ದುಲ್ ರೆಹಮಾನ್, ಗಿರೀಶ್ ರವರನ್ನು ಚಾಸಾ-69ರವರು ತಮ್ಮ ಜೊತೆ ಉದಯಗಿರಿ ಬಡಾವಣೆಗೆ ಕರೆದುಕೊಂಡು ಹೋದರು. ಅಲ್ಲಿ ಆನಂದ್ ಎಂಬುವವರಿಗೆ ಸೇರಿದ ಮನೆಗೆ ಕರೆದುಕೊಂಡು ಹೋದರು. ಆ ಮನೆಗೆ ನಾವು ಹೋದಾಗ ಗೇಟ್ ಹಾಕಿತ್ತು. ಲೋಕಾಯುಕ್ತ ಪೊಲೀಸ್ ಸಿಬ್ಬಂದಿ ಜಮೀಲ್ ಬೇಗ್ ಆ ಗೇಟನ್ನು ತೆರೆದರು. ನಂತರ ಆ ಮನೆಯ ಬಳಿ ಹೋಗಿ ಉತ್ತರ ದಿಕ್ಕಿನಲ್ಲಿರುವ ಬಾಗಿಲಿನ ಕಾಲಿಂಗ್ ಬೆಲ್ ಒತ್ತಿದರು. ಆಗ ಓರ್ವ ವ್ಯಕ್ತಿ ಬಾಗಿಲು ತೆರೆದರು. ಚಾಸಾ-69ರವರು ಆ ವ್ಯಕ್ತಿಯನ್ನು ವಿಚಾರಿಸಿದಾಗ ತಾನೇ ಆನಂದ್ ಎಂದು ತಿಳಿಸಿದರು. ಅವರಿಗೆ ಜಿಲ್ಲಾ ವಿಶೇಷ ನ್ಯಾಯಾಲಯ ಹೊರಡಿಸಿರುವ ವಾರೆಂಟನ್ನು ತೋರಿಸಿದರು. ಅವರು ಅದನ್ನು ಓದಿ ಅದಕ್ಕೆ ಸಹಿ ಹಾಕಿದರು. ನಾವು ಕೂಡ ಅದಕ್ಕೆ ಸಹಿ ಹಾಕಿದೆವು. ಮನೆ ಒಳಗೆ ಪ್ರವೇಶಿಸಿದಾಗ ಕಾರಿಡಾರ್ ಇತ್ತು. ಕಾರಿಡಾರ್ ನಲ್ಲಿ ಒಂದು ಹೋಂಡಾ ಆಕ್ಟಿವಾ, ಟಿ ವಿ ಎಸ್ ಸ್ಕೂಟಿ ದ್ವಿಚಕ್ರ ವಾಹನಗಳಿದ್ದವು. ಕಾಂಪೌಂಡ್ ನ ಹೊರಗೆ ಒಂದು ಕಾರು ಕೂಡ ಇತ್ತು.

3.ಮನೆಯ ಒಳಗೆ ವರಾಂಡಾದಲ್ಲಿ ಕ್ರಮಸಂಖ್ಯೆ 1 ರಿಂದ 6ರ ವಸ್ತುಗಳು ಕಂಡುಬಂದವು. ಮನೆಯ ಲಿವಿಂಗ್ ಹಾಲ್ ನಲ್ಲಿ ಕ್ರಮಸಂಖ್ಯೆ 1 ರಿಂದ 9ರ ವಸ್ತುಗಳು ಕಂಡುಬಂದವು. ಮನೆಯ ದಕ್ಷಿಣ ಭಾಗದ ರೂಂ ನಲ್ಲಿ ಒಂದು ಡಬಲ್ ಕಾಟ್ ಮತ್ತು ಸೊಳ್ಳೆ ಪರದೆ ಇತ್ತು. ಸದರಿ ರೂಂನ ವಾರ್ಡ್ರೋಬ್ ನ ಮೊದಲನೇ ಕಂಪಾರ್ಟ್ ಮೆಂಟ್ ನಲ್ಲಿ

ಕ್ರಮಸಂಖ್ಯೆ3 ರಿಂದ 31ರ ವಸ್ತುಗಳು ಕಂಡುಬಂದವು. ಅದೇ ಕಂಪಾರ್ಟ್‌ಮೆಂಟ್ ನಲ್ಲಿ ಒಂದು ಪ್ಲಾಸ್ಟಿಕ್ ಕವರಿನಲ್ಲಿ 5,01,700ರೂ ನಗದು ಹಣ ಇತ್ತು . ಆ ಹಣದ ಬಗ್ಗೆ ವಿವರ ಕೇಳಿದಾಗ ಸಮಂಜಸವಾದ ಉತ್ತರ ನೀಡಲಿಲ್ಲ. ಆದ್ದರಿಂದ ಚಾಸಾ-69ರವರು ಆ ಹಣವನ್ನು ವಶಪಡಿಸಿಕೊಂಡರು. 2ನೇ ಕಂಪಾರ್ಟ್ ಮೆಂಟನ್ನು ಪರಿಶೀಲಿಸಿದಾಗ ಕ್ರಮಸಂಖ್ಯೆ 1 ರಿಂದ 37ರವರೆಗಿನ ದಾಖಲೆಗಳು ಕಂಡುಬಂದವು. ಅದೇ ಕಂಪಾರ್ಟ್ ಮೆಂಟ್ ನಲ್ಲಿ ಕ್ರಮಸಂಖ್ಯೆ 1 ರಿಂದ 7ರವರೆಗಿನ ಪಾಸ್ ಬುಕ್ ಗಳು ಕಂಡುಬಂದವು. ಹಾಗೆಯೇ ಕ್ರಮಸಂಖ್ಯೆ 1 ರಿಂದ 20ರ ವರೆಗಿನ ದಾಖಲಾತಿಗಳು ಕಂಡುಬಂದವು. 3ನೇ ಕಂಪಾರ್ಟ್‌ಮೆಂಟನ್ನು ಪರಿಶೀಲಿಸಿದಾಗ ಕ್ರಮಸಂಖ್ಯೆ 1 ರಿಂದ 16ರವರೆಗಿನ ದಾಖಲೆಗಳು ಕಂಡುಬಂದವು. 2ನೇ ಕಂಪಾರ್ಟ್ ಮೆಂಟ್ ನಲ್ಲಿ ಒಂದು ಲೆದರ್ ಬ್ಯಾಗ್ ನಲ್ಲಿ ಕ್ರಮಸಂಖ್ಯೆ 1 ರಿಂದ 38ರಲ್ಲಿ ಕಾಣಿಸಿದ ಸುಮಾರು 456.940ಗ್ರಾಂ ಚಿನ್ನಭರಣಗಳು ಕಂಡುಬಂದವು. ಸದರಿ ವ್ಯಕ್ತಿಯ ಪತ್ನಿಯ ಮೈಮೇಲೆ ಸುಮಾರು 99.950ಗ್ರಾಂ ಒಡವೆಗಳು ಇದ್ದವು. ಚಾಸಾ-69ರವರು ಸ್ಥಳಕ್ಕೆ ಅಕ್ಕಸಾಲಿಗರನ್ನು ಸಿಬ್ಬಂದಿ ಜಮೀಲ್ ಬೇಗ್ ಮೂಲಕ ಕರೆಸಿದರು. ಸದರಿಯವರ ಹೆಸರು ರಮೇಶ್ ಎಂ ಪಿ ಬಿನ್ ಪುಟ್ಟಸೋಮಾಚಾರ್, ಎಸ್ ಆರ್ ಎಸ್ ಜ್ಯುವೆಲರಿ, ಹಾಸನ ಎಂದು ತಿಳಿಸಿದರು. ಅವರ ಮೂಲಕ, ದೊರೆತಂತಹ ಚಿನ್ನಾಭರಣಗಳನ್ನು ಪರಿಶೀಲಿಸಿ, ತೂಕ ಮಾಡಿ ಅದರ ಮಾರುಕಟ್ಟೆ ಬೆಲೆಯನ್ನು ಅಂದಾಜಿಸಿದರು.

4.ನಂತರ ಶೋಧನಾ ಕಾರ್ಯವನ್ನು ಮುಂದುವರೆಸಿದರು. ಆಗ ಚಾಸಾ-69ರವರಿಗೆ ಸದರಿ ವ್ಯಕ್ತಿಗೆ ಸೇರಿದ ದಾಖಲೆಗಳು ಅವರ ಮಾವ ಜಯರಾಂ ಬಿನ್ ಲೇಟ್ ಹೊಂಗಯ್ಯ, ಕುವೆಂಪುನಗರ, ಹಾಸನ ಇವರ ಮನೆಯಲ್ಲಿ ಇರುವುದಾಗಿ ಮಾಹಿತಿ ಬಂತು. ಆದ್ದರಿಂದ ಚಾಸಾ-1ರವರ ಒಂದು ಟೀಂ ನ್ನು ಅಲ್ಲಿಗೆ ಕಳುಹಿಸಿಕೊಟ್ಟರು. ಮಾಸ್ಟರ್ ಬೆಡ್ ರೂಂ ನ್ನು ಪರಿಶೀಲಿಸಿದಾಗ ಒಂದು ಕೀ ಸಿಕ್ಕಿದ್ದು, ಆ ಕೀ ಯಾರಿಗೆ ಸೇರಿದ್ದು ಎಂದು ಕೇಳಿದಾಗ

ಸದರಿಯವರು ತಮ್ಮ ಹೆಂಡತಿಯ ಹೆಸರಿನಲ್ಲಿರುವ ಕಾವೇರಿ ಗ್ರಾಮೀಣ ಬ್ಯಾಂಕಿನ ಲಾಕರ್ ಕೀ ಎಂದು ಹೇಳಿದರು. ಅಲ್ಲಿ ಹೋಗಿ ಪರಿಶೀಲನೆ ಮಾಡುವ ಸಲುವಾಗಿ ಈಮನೆಯಲ್ಲಿ ಮಾಡುತ್ತಿದ್ದ ಶೋಧನೆಯನ್ನು ಸ್ಥಗಿತಗೊಳಿಸಿ ಅಲ್ಲಿಗೆ ಕರೆದುಕೊಂಡು ಹೋದರು. ಅಲ್ಲಿ ಬ್ಯಾಂಕಿನ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ್ ರವರು ಇದ್ದರು. ಅವರಿಗೆ ಭೇಟಿ ಮಾಡಿ ವಿಚಾರ ತಿಳಿಸಿ ಲಾಕರ್ ನ್ನು ಪರಿಶೀಲನೆ ಮಾಡಿದಾಗ ಚಿನ್ನಾಭರಣಗಳು ಕಂಡುಬಂದವು, ಅದು ಸುಮಾರು 125 ಗ್ರಾಂ ಇತ್ತು. ಅಕ್ಕಸಾಲಿಗರನ್ನು ಅಲ್ಲಿಗೆ ಕರೆದುಕೊಂಡು ಹೋಗಿದ್ದರು, ಅವರಿಂದ ಅದನ್ನು ತೂಕ ಮಾಡಿ ವಶಪಡಿಸಿಕೊಂಡು ಮಹಜರು ಮಾಡಿದರು. ಮತ್ತೆ ಆ ಚಿನ್ನಾಭರಣವನ್ನು ಲಾಕರ್ ನಲ್ಲಿಟ್ಟು ಲಾಕರ್ ಕೀಯನ್ನು ಆನಂದ್ ರವರ ಪತ್ನಿ ಶುಭಾರವರಿಗೆ ಕೊಟ್ಟೆವು.

5.ಮತ್ತೆ ನಮ್ಮೆಲ್ಲರನ್ನು ಕರೆದುಕೊಂಡು ಆನಂದ್ ರವರ ಮನೆಗೆ ಬಂದರು. ಆ ಮನೆಯ ಡೈನಿಂಗ್ ಹಾಲ್ ನ್ನು ಪರಿಶೀಲಿಸಿದಾಗ ಅಲ್ಲಿ ಕ್ರಮಸಂಖ್ಯೆ 1 ರಿಂದ 12ರ ವಸ್ತುಗಳು ಕಂಡುಬಂದವು. ಆ ಡೈನಿಂಗ್ ಹಾಲ್ ಗೆ ಹೊಂದಿಕೊಂಡಿರುವ ಕಾರ್ ಪಾರ್ಕಿಂಗ್ ಹಾಲನ್ನು ಪರಿಶೀಲಿಸಿದಾಗ ಅಲ್ಲಿ ಕ್ರಮಸಂಖ್ಯೆ 1 ರಿಂದ 9ರವರೆಗಿನ ವಸ್ತುಗಳು ಕಂಡುಬಂದವು. ಬಾತ್ ರೂಂ ಗೆ ಹೋಗುವ ಪ್ಯಾಸೇಜನ್ನು ಪರಿಶೀಲಿಸಿದಾಗ ಕ್ರಮಸಂಖ್ಯೆ 1 ರಿಂದ 6ರ ವಸ್ತುಗಳು ಕಂಡುಬಂದವು. ಅಡುಗೆ ಮನೆ ಪರಿಶೀಲಿಸಿದಾಗ ಕ್ರಮಸಂಖ್ಯೆ 1 ರಿಂದ 12ರ ವಸ್ತುಗಳು ಕಂಡುಬಂದವು. ದೇವರಮನೆ ಪರಿಶೀಲಿಸಿದಾಗ ಕ್ರಮಸಂಖ್ಯೆ 1 ರಿಂದ 4ರ ವಸ್ತುಗಳು ಕಂಡುಬಂದವು. ಮಕ್ಕಳ ರೂಂ ನ್ನು ಪರಿಶೀಲಿಸಿದಾಗ ಕ್ರಮಸಂಖ್ಯೆ 1 ರಿಂದ 14ರ ವಸ್ತುಗಳು ಕಂಡುಬಂದವು.

6.ಚಾಸಾ1ರವರು ತಮ್ಮ ಟೀಂ ನೊಂದಿಗೆ ಚಾಸಾ-69ರವರ ಮುಂದೆ ವರದಿ

ಮಾಡಿಕೊಂಡರು.ಅವರಿಗೆ ಚಾಸಾ-69ರವರು ಜಿಲ್ಲಾ ವಿಶೇಷ ನ್ಯಾಯಾಲಯ ನೀಡಿದ್ದ ಶೋಧನಾ ವಾರೆಂಟನ್ನು ನೀಡಿ ಆನಂದ್ ರವರು ಕರ್ತವ್ಯ ನಿರ್ವಹಿಸುತ್ತಿದ್ದ ಹಾಸನ ನಗರಸಭೆಗೆ ಶೋಧನೆ ಮಾಡಲು ಆರೋಪಿತರನ್ನು ಅವರೊಂದಿಗೆ ಕಳುಹಿಸಿಕೊಟ್ಟರು. ನಂತರ ನಾವು ಮನೆಯ ಮೊದಲನೇ ಮಹಡಿಗೆ ಪ್ರವೇಶಿಸಿದಾಗ ಹಾಲ್ ನಲ್ಲಿ ಕ್ರಮಸಂಖ್ಯೆ 1 ಮತ್ತು 2ರ ವಸ್ತುಗಳು ಕಂಡುಬಂತು, ಅಲ್ಲಿದ್ದ ಬೆಡ್ ರೂಂ ನಲ್ಲಿ ಪರಿಶೀಲಿಸಿದಾಗ ಕ್ರಮಸಂಖ್ಯೆ1 ರಿಂದ 15ರ ವಸ್ತುಗಳು ಕಂಡುಬಂದವು. ಇನ್ನೊಂದು ಬೆಡ್ ರೂಂ ಪರಿಶೀಲಿಸಿದಾಗ ಅದರಲ್ಲಿ ಕ್ರಮಸಂಖ್ಯೆ1 ರಿಂದ 13ರ ವಸ್ತುಗಳು ಕಂಡುಬಂದವು. ಶೋಧನಾ ವೇಳೆ ಆನಂದ್ ಮತ್ತು ಅವರ ಹೆಂಡತಿಗೆ ಸಂಬಂಧಿಸಿದ ಪಾಸ್ ಪೋರ್ಟ್( ಗಳು ದೊರೆತವು. ಅದನ್ನು ಅವರ ವಶಕ್ಕೆ ಬಿಟ್ಟುಕೊಟ್ಟರು. ಮೊದಲನೇ ಮಹಡಿಯಲ್ಲಿ 20 ಇಂಟು 30 ಅಳತೆಯ ಮನೆಯನ್ನು ಬಿಎಸ್ ಎಲ್ ಎಲ್ ನೌಕರರಾದ ಧನಂಜಯ್ ರವರಿಗೆ ಭೋಗ್ಯಕ್ಕೆ ನೀಡಿರುವುದು ಕಂಡುಬಂದಿರುತ್ತದೆ. ಶೋಧನಾ ಸಮಯದಲ್ಲಿ ಮಾಸ್ಟರ್ ಬೆಡ್ ರೂಂನಲ್ಲಿ 2ನೇ ಕಂಪಾರ್ಟ್ ಮೆಂಟ್ ನಲ್ಲಿ ಮತ್ತು 3ನೇ ಕಂಪಾರ್ಟ್ ಮೆಂಟ್ ನಲ್ಲಿ ಸಿಕ್ಕಿದ್ದ ದಾಖಲೆಗಳನ್ನು ವಶಪಡಿಸಿಕೊಂಡರು. ಈ ಬಗ್ಗೆ ಸ್ಥಳದಲ್ಲಿ ಮಹಜರನ್ನು ಈಗಾಗಲೇ ಗುರುತಿಸಲ್ಪಟ್ಟಿರುವ ನಿಪಿ-15ರಂತೆ ತಯಾರಿಸಿದರು. ಅದರಲ್ಲಿ ನನ್ನ ರುಜು ಇದ್ದು ಅದನ್ನು ನಿಪಿ-15(ಬಿ) ಎಂದು ಗುರುತಿಸಲಾಯಿತು. ಬ್ಯಾಂಕಿನಲ್ಲಿ ಲಾಕರ್ ಪರಿಶೀಲಿಸಿ ಮಾಡಿದ ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದನ್ನುನಿಪಿ-56 ಎಂದು ಗುರುತಿಸಲಾಯಿತು. ಅದರಲ್ಲಿ ನನ್ನ ರುಜು ಇದ್ದುನಿಪಿ-56(ಎ) ಎಂದು ಗುರುತಿಸಲಾಯಿತು ಆ ದಿವಸ ಮನೆಯಲ್ಲಿ ಸಿಕ್ಕಿದ್ದಂತಹ ವ್ಯಕ್ತಿಯನ್ನು ನೋಡಿದರೆ ಗುರುತಿಸುತ್ತೇನೆ. ಅವರು ಈದಿವಸ ನ್ಯಾಯಾಲಯದ ಮುಂದಿರುವ ಆರೋಪಿತರು.

**ಪಾಟೀಸವಾಲುಃ ಆರೋಪಿ ಪರ** ಶ್ರೀ ಡಿ ಎಂ ಪಿ **ವಕೀಲರಿಂದಃ**

ಆ ದಾಳಿ ಸಮಯದಲ್ಲಿ ಚಿನ್ನದ ಒಡವೆಗಳ ಅಂದಾಜು ಮೌಲ್ಯಕ್ಕೆ ಅಕ್ಕಸಾಲಿಗರನ್ನು ಕರೆಸಿದ್ದನ್ನು ಬಿಟ್ಟರೆ ಇನ್ನುಳಿದ ವಸ್ತುಗಳ ಅಂದಾಜು ಮೌಲ್ಯ ನಿಗಧಿಪಡಿಸಲು ಬೇರೆಯಾರೇ

ಪರಿಣಿತರನ್ನು ಕರೆಸಿರಲ್ಲಿ ಎಂದರೆ ನಿಜ. ಉಳಿದ ವಸ್ತುಗಳ ಬೆಲೆಯನ್ನು ತನಿಖಾಧಿಕಾರಿಗಳೇ ನಿಗಧಿಪಡಿಸಿದರು. ಚಿನ್ನ ಮತ್ತು ಬೆಳ್ಳಿಯ ದರವನ್ನು ಆ ದಾಳಿ ಮಾಡಿದ ದಿನದಂದು ಇದ್ದ ಬೆಲೆಯಂತೆ ನಿಗಧಿಮಾಡಿರುತ್ತಾರೆ. ಯಾವ ಯಾವ ವರ್ಷದಲ್ಲಿ ಅದನ್ನು ಖರೀದಿ ಮಾಡಿರುತ್ತಾರೆ ಎನ್ನುವ ಬಗ್ಗೆ ದಾಖಲೆಗಳು ಸಿಕ್ಕಿರುವುದಿಲ್ಲ, ಆದ್ದರಿಂದ ವಶಪಡಿಸಿಕೊಂಡಿರುವುದಿಲ್ಲ.

<u>ಮರು ವಿಚಾರಣೆಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**